

ಪುನೀತ್ ನೆನಪು: ಅಭಿಮಾನಿಗಳ ಎದೆಯಲ್ಲಿ ಸದಾ ಜೀವಂತ

ಆದರೆ, ತೆರೆಕಂಡ ಸಿನಿಮಾಗಳ ದೊಡ್ಡ ಸಂಖ್ಯೆ ಯಶಸ್ಸಿನ ಮಾನದಂಡವೇನೂ ಆಗಿರುವುದಿಲ್ಲ. ಬಾಕ್ಸಾಫೀಸ್‌ನ ಅಳತೆಗೋಲು ಹಿಡಿದುನೋಡಿದರೆ, ಯಶಸ್ಸು ಕಂಡ ಸಿನಿಮಾಗಳ ಸಂಖ್ಯೆ ಐದಾರರ ಗಡಿ ದಾಟುವುದಿಲ್ಲ. ಆದರೆ, ಕೆಲವು ಸಿನಿಮಾಗಳು ಗಳಿಸಿದ ಯಶಸ್ಸಿನ ಪ್ರಮಾಣವಿದೆಯಲ್ಲ, ಅದು ಚಿತ್ರರಂಗಕ್ಕೆ ವರ್ಷದುದ್ದಕ್ಕೂ ಕಾವು ತುಂಬಿದ್ದು ಸುಳ್ಳಲ್ಲ.

2022ರಲ್ಲಿ ತೆರೆಕಂಡ ಪ್ರಮುಖ ಚಿತ್ರಗಳನ್ನು ಗಮನಿಸುತ್ತಾ ಹೋದರೆ, ಸಂತಸ–ಸಂಕಟಗಳ ಕಲಸುಮೇಲೋಗರದ ಚಿತ್ರಣವೊಂದು ಕಾಣಿಸುತ್ತದೆ. ಗೆಲುವಿನ ಯಶಸ್ಸಿನಂತೆಯೇ, ನಿರೀಕ್ಷೆಯ ಮಟ್ಟವೇರಲು ಸೋತ ಪ್ರಯತ್ನಗಳೂ ಗಮನಸೆಳೆಯುತ್ತವೆ. ಸೋಲಿನಿಂದಾಗಿ ವಿಷಣ್ಣತೆಯನ್ನು ಹುಟ್ಟಿಸುವ ಸಿನಿಮಾಗಳೂ ಇವೆ.

ಫೆಬ್ರುವರಿಯಲ್ಲಿ ತೆರೆಕಂಡ ಸಿನಿಮಾಗಳಲ್ಲಿ ಗಮನಸೆಳೆದದ್ದು ಡಾರ್ಲಿಂಗ್ ಕೃಷ್ಣ ನಟನೆ–ನಿರ್ದೇಶನದ ‘ಲವ್ ಮಾಕ್ಟೇಲ್–2’. ಎರಡು ವರ್ಷಗಳ ಹಿಂದೆ, 2020ರಲ್ಲಿ ತೆರೆಕಂಡು ಯಶಸ್ವಿಯಾಗಿದ್ದ ‘ಲವ್ ಮಾಕ್ಟೇಲ್’ನ ಚುಂಗು ಹಿಡಿದು ಸಾಗಿದಂತಿದ್ದ, ಎರಡನೇ ಭಾಗದಲ್ಲೂ ಡಾರ್ಲಿಂಗ್ ಕೃಷ್ಣ ಹಾಗೂ ಮಿಲನಾ ನಾಗರಾಜ್ ಜೋಡಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಸಿನಿಮಾ ದೊಡ್ಡ ಯಶಸ್ಸು ಕಾಣದಿದ್ದರೂ ಒಳ್ಳೆಯ ಮಾತುಗಳನ್ನಂತೂ ತನ್ನದಾಗಿಸಿಕೊಂಡಿತು.

## ಶಕ್ತಿಮದ್ದು ‘ಜೇಮ್ಸ್’

ಕೊರೊನಾದ ಚಳಿ ಬಿಟ್ಟು ಚಿತ್ರರಸಿಕರು ಚಿತ್ರಮಂದಿರಗಳತ್ತ ಧಾವಿಸಲು ಅಗತ್ಯವಾದ ಉತ್ಸಾಹ ತುಂಬಲು ಪುನೀತ್ ಅವರೇ ಬರಬೇಕಾಯಿತು – ‘ಜೇಮ್ಸ್’ ಮೂಲಕ. ಮಾರ್ಚ್ 17ರಂದು, ಅಪ್ಪು ಹುಟ್ಟುಹಬ್ಬದ ಸಂದರ್ಭದಲ್ಲಿ ತೆರೆಕಂಡ ‘ಜೇಮ್ಸ್’, ಪುನೀತ್ ನಾಯಕನಟರಾಗಿ ನಟಿಸಿದ ಕೊನೆಯ ಸಿನಿಮಾ ಎನ್ನುವ ಭಾವಸ್ಪರ್ಶದ ಲಾಭಪಡೆಯಿತು. ಶೂಟಿಂಗ್ ಮುಗಿದು, ಡಬ್ಬಿಂಗ್ ಬಾಕಿಯಿದ್ದ ಚಿತ್ರವನ್ನು ನಿರ್ದೇಶಕ ಚೇತನ್ ಕುಮಾರ್ ಜಾಣ್ಮೆಯಿಂದ ತೆರೆಗೆ ಅಳವಡಿಸಿದ್ದರು. ಪುನೀತ್ ಪಾತ್ರಕ್ಕೆ ಶಿವರಾಜ್‌ಕುಮಾರ್ ಅವರಿಂದ ಕಂಠದಾನ ಮಾಡಿಸಲಾಯಿತು. ಪ್ರಿಯಾ ಆನಂದ್ ಹಾಗೂ ಶರತ್ ಕುಮಾರ್ ತಾರಾಗಣದಲ್ಲಿದ್ದ ಪ್ರಮುಖ ಕಲಾವಿದರು. ‘ಜೇಮ್ಸ್’ ಚಿತ್ರವನ್ನು ಪ್ರೇಕ್ಷಕರು ಮುಗಿಬಿದ್ದು ನೋಡಿದರು. ಇದರ ಪರಿಣಾಮ, ಸಿನಿಮಾ ತೆರೆಕಂಡ ಮೊದಲ ವಾರದಲ್ಲೇ ದಾಖಲೆಯ ನೂರು ಕೋಟಿ ರೂಪಾಯಿ ಗಳಿಕೆ ದಾಟಿ ಮುನ್ನಡೆಯಿತು. ಕನ್ನಡದ ಸಾರ್ವಕಾಲಿಕ ಶ್ರೇಷ್ಠ ಗಳಿಕೆಯ ಚಿತ್ರಗಳ ಸಾಲಿಗೆ ‘ಜೇಮ್ಸ್’ ಸೇರಿಕೊಂಡಿತು.

‘ಜೇಮ್ಸ್’ ಗೆಲುವಿನ ಲಹರಿಯನ್ನು ಮತ್ತಷ್ಟು ವಿಸ್ತರಿಸಿದ್ದು ಏಪ್ರಿಲ್ 14ರಂದು ತೆರೆಕಂಡ ‘ಕೆಜಿಎಫ್– ಚಾಪ್ಟರ್ 2’. ಪ್ರಶಾಂತ್ ನೀಲ್ ನಿರ್ದೇಶನದ, ಯಶ್ ನಾಯಕರಾಗಿ ನಟಿಸಿದ್ದ ‘ಕೆಜಿಎಫ್– ಚಾಪ್ಟರ್ 1’, 2018ರಲ್ಲಿ ತೆರೆಕಂಡು ಬಹುದೊಡ್ಡ ಯಶಸ್ಸು ಗಳಿಸಿತ್ತು. ಆ ಯಶಸ್ಸನ್ನು ಮೀರಿಸುವಂತಿತ್ತು ‘ಚಾಪ್ಟರ್ 2’ ಅಬ್ಬರ.

ಯಶ್ ಜೊತೆ ಸಂಜಯ್ ದತ್, ಶ್ರೀನಿಧಿ ಶೆಟ್ಟಿ, ರವೀನಾ ಟಂಡನ್, ಪ್ರಕಾಶ್ ರಾಜ್, ಅರ್ಚನಾ

ಸಂಗೀತ ಸ್ವರಗಳ ಸ್ವಂತಿಕೆಯ ಬಗ್ಗೆ ಪ್ರಶ್ನೆಗಳನ್ನು ಉಂಟುಮಾಡಿದೆ. ‘ಕಾಂತಾರ’ದ ಮತ್ತೊಂದು ಹಾಡು ‘ಸಿಂಗಾರ ಸಿರಿಯೇ’ ಮರಾಠದ ‘ನಟರಂಗ್’ ಸಿನಿಮಾದ ‘ಅಪ್ಸರಾ ಆಲಿ’ ಗೀತೆಗೆ ಋಣಿಯಾಗಲಿದೆ ಎನ್ನುವ ಮಾತುಗಳೂ ಇವೆ.

‘ಕಾಂತಾರ’ದ ಹಾಡಿನ ವಿವಾದದ ಜೊತೆಗೆ ‘ಡೊಳ್ಳು’ ಸಿನಿಮಾಕ್ಕೆ ಪ್ರಕಟವಾಗಿದ್ದ ‘ಅತ್ಯುತ್ತಮ ಆಡಿಯೊಗ್ರಫಿ’ (ಲೊಕೇಶನ್ ಸೌಂಡ್ ರೆಕಾರ್ಡಿಂಗ್) ರಾಷ್ಟ್ರಪ್ರಶಸ್ತಿಯನ್ನೂ ನೆನಪಿಸಿಕೊಳ್ಳಬೇಕು. ‘ಡೊಳ್ಳು ಸಿಂಕ್ ಸೌಂಡ್ ಸಿನಿಮಾ ಅಲ್ಲ. ಲೊಕೇಶನ್ ಸೌಂಡ್ ರೆಕಾರ್ಡಿಂಗ್ ವಿಭಾಗದಲ್ಲಿ ಆ ಚಿತ್ರಕ್ಕೆ ಪ್ರಶಸ್ತಿ ನೀಡಿದ್ದಾದರೂ ಹೇಗೆ?’ ಎಂದು ದೇಶದ ಪ್ರಸಿದ್ಧ ಭಾರತೀಯ ಸಿನಿಮಾದ ವಿಶ್ವಪ್ರಸಿದ್ಧ ಧ್ವನಿ ವಿನ್ಯಾಸಕಾರ ರಸೂಲ್ ಪೂಕುಟ್ಟಿ ಪ್ರಶ್ನಿಸಿದ್ದರು. ನಂತರದ ದಿನಗಳಲ್ಲಿ, ಪ್ರಶಸ್ತಿಯನ್ನು ಹಿಂತೆಗೆದುಕೊಳ್ಳಲಾಯಿತು.

‘ಕಾಂತಾರ’ ಮತ್ತು ‘ಡೊಳ್ಳು’ ಸಿನಿಮಾದ ಘಟನೆಗಳು, ಸೃಜನಶೀಲತೆಗೆ ಸಂಬಂಧಿಸಿದಂತೆ ಕನ್ನಡ ಸಿನಿಮಾ ನಿರ್ಮಾತೃಗಳು ಪ್ರಾಂಜಲವಾಗಿ ನಡೆದುಕೊಳ್ಳದಿರುವುದಕ್ಕೆ ಉದಾಹರಣೆಗಳಂತಿವೆ.

‘ಬನಾರಸ್’ ಸಿನಿಮಾ ತೆರೆಕಾಣುವ ಸಂದರ್ಭದಲ್ಲಿ ಎದುರಾದ ‘ಬಾಯ್ಕಾಟ್’ ಬೆದರಿಕೆಯನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಇಂಥ ಘಟನೆಗಳಿಗೆ ಸಿನಿಮಾ ಮಂದಿ ಯಾವ ರೀತಿಯಲ್ಲಿ ಸ್ಪಂದಿಸುತ್ತಾರೆ ಎನ್ನುವುದು ಚಿತ್ರೋದ್ಯಮದ ಆರೋಗ್ಯವನ್ನು ಸೂಚಿಸುತ್ತದೆ. ‘ಕಾಂತಾರ’ಕ್ಕೆ ಸಂಬಂಧಿಸಿದ ಬಹುತೇಕ ಚರ್ಚೆಗಳು ಸಿನಿಮೇತರ ಕಾರಣಕ್ಕಾಗಿಯೇ ನಡೆದದ್ದು, ಧಾರ್ಮಿಕ ಅಸಹನೆ ಚಿತ್ರರಂಗಕ್ಕೂ ಪ್ರವೇಶಿಸಿದೆಯೇ ಎನ್ನುವ ಅನುಮಾನಕ್ಕೆ ಎಡೆ ಮಾಡಿಕೊಡುವಂತಿದೆ.



ಕಿಚ್ಚು ನೋಟ: ವಿಕ್ರಾಂತ್ ರೋಣ ಸಿನಿಮಾದಲ್ಲಿ ನಟ ಸುದೀಪ್